ದಿಃ 22-02-2016 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲ ರವರಿಂದಃ

ಡೈರಿಯಲ್ಲಿ ರಾಯಪ್ಪನ ಹೆಸರು ದಾಖಲಾಗಿದ್ದು ದಿಃ 6-12-1999 ಎಂದರೆ ನಿಜ. ನನಗೆ ನೊಂದು ಕರಾರು ಪತ್ರ ದಿಃ 8-12-1999 ರಲ್ಲಿ ಆಗಿದೆ. ರಾಯಪ್ಪನ ಹೆಸರು ದಾಖಲಾಗಿ ಒಂದು ದಿನಕ್ಕೆ ನನಗೆ ಕರಾರಾಗಿದೆ ಎಂದರೆ ಗೊತ್ತಿಲ್ಲ. ಮೊದಲನೇ ಕರಾರು ಪತ್ರದ ಪ್ರಕಾರ ನನಗೆ ಕಬ್ಜಾ ಬಂದಿಲ್ಲ ಎಂದರೆ ನಿಜ. ಎರಡನೇ ಕರಾರು ಪತ್ರದ ಪ್ರಕಾರ ನನಗೆ ಕಬ್ಜಾ ಬಂದಿದೆ. ಬಾಂಡ್ ರೈಟರ್ ಕಛೇರಿಯಲ್ಲಿ ನನಗೆ ಕಬ್ಜೆಯನ್ನು ಕೊಟ್ಟಿದ್ದಾರೆ. ಕಬ್ಜೆಯನ್ನು ಕೊಡುವ ಸಮಯದಲ್ಲಿ ದುಂಡಪ್ಪ ಕಾಪಶಿ, ಈರಪ್ಪ ಕಾಪಶಿ ಮತ್ತು ಭಂಡಾರಿಯವರು ಇದ್ದರು. ಇವರೆಲ್ಲರೂ ಕರಾರು ಪತ್ರ ದಿಃ 11-4-2000 ಕ್ಕೆ ಸಹಿ ಮಾಡಿದ್ದಾರೆ.

ನಿಡಿ 23 ನ್ನು ಸಾಕ್ಷಿಗೆ ತೋರಿಸಲಾಗಿ ಈ ಕಾಗದ ಪತ್ರದಲ್ಲಿ ಯಾವುದೇ ಸಾಕ್ಷಿಗಳು ಸಹಿ ಮಾಡಿಲ್ಲ ಎಂದಾಗ, ಹೌದು ಸಹಿ ಮಾಡಿಲ್ಲ ಎಂದು ಹೇಳಿದ್ದಾರೆ. ರಾಯಪ್ಪ ಹೆಂಡತಿ ಮತ್ತು ಮಕ್ಕಳು ಸಹಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕರಾರು ಪತ್ರದ ಸಮಯಲ್ಲಿ 5000/-ರೂ. ಪಡೆದುಕೊಳ್ಳುವಾಗ ಯಾರ್‍ಯಾರು ಹಿರಿಯರು ಇದ್ದರೆಂದರೆ ನನಗೆ ಗೊತ್ತಿಲ್ಲ. ಸದರಿ 5000/- ರಾಯಪ್ಪನಿಗೆ ಮುಟ್ಟಿದ ಬಗ್ಗೆ ಯಾರು ಸಹಿ ಮಾಡಿಲ್ಲ ಎಂದರೆ ಸುಳ್ಳು. ನಿಡಿ 23 ನ್ನು ಮತ್ತೊಮ್ಮೆ ಸಾಕ್ಷಿಗೆ ತೋರಿಸಲಾಗಿ ಇದರಲ್ಲಿ ಸಹಿ ಇಲ್ಲ ಎಂದು ಕೇಳಿದಾಗ ಸಾಕ್ಷಿಯು ಅವರ ಸಹಿಗಳು ಇವೆ ಎಂದು ಹೇಳುತ್ತಾರೆ. ಮತ್ತೊಮ್ಮೆ ನಿಡಿ 23 ನ್ನು ಸಾಕ್ಷಿಗೆ ತೋರಿಸಿ ಸಹಿಗಳನ್ನು ತೋರಿಸು ಎಂದಾಗ ನನಗೆ ಕಣ್ಣು ಸಮಸ್ಯೆ ಇರುವುದರಿಂದ ಆ ಕಾಗದದಲ್ಲಿರುವ ಸಹಿಗಳು ಕಾಣುವುದಿಲ್ಲ ಎಂದು ಸಾಕ್ಷಿಯು ಹೇಳುತ್ತಾರೆ.

ನಿಡಿ 23 ನ್ನು ಬಿಟ್ಟು ನಾನು ಕಬ್ಜೆಯಲ್ಲಿದ್ದೇನೆಂದು ತೋರಿಸಲು ಬೇರೆ ಯಾವ ದಾಖಲೆಗಳೂ ಇಲ್ಲ. ರಾಯಪ್ಪ ಸ್ವಂತ ತೆಗೆದುಕೊಂಡಿದ್ದರಿಂದ ದಾವಾ ಆಸ್ತಿ ಆತನ ಸ್ವಂತ ಆಸ್ತಿ ಎಂದು ಹೇಳುತ್ತೇನೆ. ದಾವಾ ಆಸ್ತಿಯನ್ನು ತೆಗೆದುಕೊಳ್ಳುವ ಮುನ್ನ ಹಿರಿಯರ 2 ಆಸ್ತಿಗಳನ್ನು ಮಾರಿದ್ದ ಎಂದರೆ ನನಗೆ ಗೊತ್ತಿಲ್ಲ. ಹಿರಿಯರ ಆಸ್ತಿಗಳನ್ನು ಮಾರಿ ಬಂದ ಹಣದಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ರಾಯಪ್ಪನ ಸ್ವಂತ ಆಸ್ತಿ ಎಂದು ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ. ರಾಯಪ್ಪ ಶೇತ್ಕಿ ಕೆಲಸ ಬಿಟ್ಟು ಬೇರೆ ಯಾವ ಉದ್ಯೋಗ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ರಾಯಪ್ಪ ಯಾರ ಕಡೆಯಿಂದ ದಾವಾ ಆಸ್ತಿಯನ್ನು ಖರೀದಿ ಮಾಡುವ ಸಲುವಾಗಿ ಸಾಲ ಮಾಡಿದ್ದಾನೆಂದರೆ ನನಗೆ ಗೊತ್ತಿಲ್ಲ. ರಾಯಪ್ಪನಿಗೆ ಹೆಂಡತಿ ಮಕ್ಕಳು

ಇದ್ದದ್ದು ಆತನ ತಂದೆ ತಾಯಿಯರಿಗೆ ಗೊತ್ತಿತ್ತೊ ಇಲ್ಲವೋ ನನಗೆ ಗೊತ್ತಿಲ್ಲ. ನಿಡಿ 23 ರಲ್ಲಿ ನೀಡಿದ ಕಬ್ಜೆಯನ್ನು ನಿಡಿ 3 ರ ತನಕ ಮುಂದುವರೆಸಿದ್ದೇವೆಂದು ಬರೆದಿರುವುದು ಸುಳ್ಳು ಎಂದರೆ ಸಾಕ್ಷಿಯು ಸರಿಯಲ್ಲ ಎಂದು ಹೇಳುತ್ತಾರೆ. ನಾನು 22,000/- ರೂ. ಗಳನ್ನು ಉಳಿದ ಹಣವಾಗಿ ಕೊಡಬೇಕಾಗಿತ್ತು. ಸದರಿ ಖರೀದಿ ಪತ್ರದಲ್ಲಿ 45,000/- ಉಳಿದ ಹಣವಾಗಿ ಕೊಡಬೇಕಾಗಿದೆ ಎಂದು ಬರೆದಿದೆ ಎಂದರೆ ಸುಳ್ಳು. 45,000/- ಉಳಿದ ಹಣವನ್ನು ಖರೀದಿ ಮಾಡುವ ದಿನ ನಾನು ಕೊಟ್ಟಿದ್ದೇನೆ. ಖರೀದಿ ಪತ್ರದಲ್ಲಿ 45,000/- ಉಳಿದ ಹಣವನ್ನು ಖರೀದಿ ಮಾಡುವ ದಿನ ನಾನು ಕೊಟ್ಟಿದ್ದೇನೆ ಎಂದು ಬರೆದಿಲ್ಲ ಎಂದರೆ ಸುಳ್ಳು. 22,000 ಬದಲಾಗಿ 45,000 ಹಣವನ್ನು ಯಾವ ಕಾರಣಕ್ಕೆ ಕೊಟ್ಟಿದ್ದೇನೆಂದು ಖರೀದಿ ಪತ್ರದಲ್ಲಿ ಬರೆದಿಲ್ಲ ಎಂದರೆ ನಿಜ. ಮಾರಾಟ ಬೆಲೆಯನ್ನು 1,02,000 ದಿಂದ 1,25,000 ದವರೆಗೆ ಯಾವ ಕಾರಣಕ್ಕೆ ಏರಿಸಿದ್ದಾರೆಂದು ನಿಡಿ 3 ರಲ್ಲಿ ಬರೆದಿಲ್ಲ ಎಂದರೆ ನಿಜ. ರಾಯಪ್ಪ ನನ್ನಿಂದ ಯಾವಾಗಲೂ 75,000, 5,000, 45,000 ಹಣವನ್ನು ಪಡೆದುಕೊಂಡಿಲ್ಲದಿದ್ದರೂ ಪೋಕಳಾಗಿ ಬರೆಸಿದ್ದೇನೆಂದರೆ ಸುಳ್ಳು. ರಾಯಪ್ಪನಿಗೆ ದಾವಾ ಜಮೀನನ್ನು ಮಾರುವ ಅಧಿಕಾರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರಕ್ಕೆ ಚೂನವ್ವ ಮತ್ತು ಮಕ್ಕಳು ಸಹಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಖರೀದಿ ಪ್ರಕಾರ ನನ್ನ ಹೆಸರು ದಾವಾ ಜಮೀನಿಗೆ ದಾಖಲಾದ ಸಮಯದಲ್ಲಿ ಈ ಪ್ರಕರಣ ಚಾಲ್ತಿಯಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಖರೀದಿಯಾದ ಎಷ್ಟು ದಿನಕ್ಕೆ ಹಕ್ಕು ದಾಖಲೆಯಾಯಿತು ಎಂದರೆ ಗೊತ್ತಿಲ್ಲ. ಸದರಿ ಹಕ್ಕು ದಾಖಲೆ ಮೇಲೆ ವಾದಿಯರು ಬೈಲಹೊಂಗಲದ ಉಪ ವಿಭಾಗಾಗಧಿಕಾರಿಯವರ ನ್ಯಾಯಾಲಯದಲ್ಲಿ ಅಪೀಲು ಹಾಕಿದ್ದಾರೆಂದರೆ ನಿಜ. ಎ.ಸಿಯವರು ನನ್ನ ಹೆಸರಿನ ಹಕ್ಕು ದಾಖಲೆಯನ್ನು ರದ್ದು ಮಾಡಿದರೆಂದರೆ ಸುಳ್ಳು. ರಾಯಪ್ಪನು ತನ್ನ ಸ್ವಂತ ಅಡಚಣೆ ಸಲುವಾಗಿ ದಾವಾ ಆಸ್ತಿಯನ್ನು ಮಾರಿದ್ದಾನೆ. 1 ನೇ ಪ್ರತಿವಾದಿ ಆಸ್ತಿಯನ್ನು ಮಾರಾಟ ಮಾಡಿದ ವ್ಯವಹಾರವು ವಾದಿಯರ ಮೇಲೆ ಬಂಧನಕಾರಕ ಆಗಿರುತ್ತದೆ ಎಂದು ಹೇಳಿ ವಾದಿ ಎಂದರೆ ಯಾರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ವಾದಿ ಎಂದರೆ ರಾಯಪ್ಪ ಎಂದು ಹೇಳುತ್ತಾರೆ. ಖರೀದಿ ತೆಗೆದುಕೊಂಡು ನಂತರ ಜಮೀನನ್ನು ಸುಧಾರಣೆ ಮಾಡಿದ ಬಗ್ಗೆ ಕಾರದ ಪತ್ರಗಳನ್ನು ಹಾಜರು ಪಡಿಸಿಲ್ಲ. ನಾನೇ ಕಬ್ಬು ಬೆಳೆದು ಬೆಲ್ಲ ತಯಾರಿಸುತ್ತೇನೆಂದು ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ. ದಾವಾ ಜಮೀನು ನನ್ನ ಕಬ್ಜೆಯಲ್ಲಿದೆ ಎಂದು ಯಾವುದೇ ನ್ಯಾಯಾಲಯ ಆದೇಶ ಮಾಡಿಲ್ಲ ಎಂದರೆ ಸುಳ್ಳು. ಈ ದಾವೆಯಲ್ಲಿ ಕಬ್ಬು ಕಡಿಯಲು ಹರಕತ್ ಮಾಡಬಾರೆದೆಂದು ಚೂನವ್ವಳ ಪರ ಮಧ್ಯಂತರ ಆದೇಶವಾಗಿದೆ ಎಂದರೆ ಸುಳ್ಳು. ಸರ್ವೆ ನಂ. 117/15 ರಾಯಪ್ಪನ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ರಾಯಪ್ಪನಿಗೆ ಆತನ ಊರಿನಲ್ಲಿ ಕುಡುಕ ರಾಯಪ್ಪ ಎಂದು ಕರೆಯುತ್ತಿದ್ದರು ಮತ್ತು ಆತನಿಗೆ ಎಲ್ಲಾ ತರಹದ ಚಟಗಳಿದ್ದವು ಎಂದರೆ ಸುಳ್ಳು. ನಾನು ಚೂನವ್ವನ ಮಕ್ಕಳ ಪಾಲನ್ನು ಕಬಳಿಸಲು ಸುಳ್ಳು ಖರೀದಿ ತೆಗೆದುಕೊಡಿದ್ದೇನೇಂದರೆ ಸುಳ್ಳು. ರಾಯಪ್ಪ

ಜೀವಂತ ಇದ್ದಾಗ ಆತನ ಹೆಂಡತಿ ಮಕ್ಕಳು ದಾವಾ ಜಮೀನಿನ ಕಬ್ಜೆಯಲ್ಲಿದ್ದರೆಂದರೆ ಸುಳ್ಳು. ರಾಯಪ್ಪನ ಮರಣಾನಂತರ ಆತನ ಹೆಂಡತಿ ಮಕ್ಕಳು ದಾವಾ ಜಮೀನಿನ ಕಬ್ಜೆಯಲ್ಲಿದ್ದರೆಂದರೆ ಸುಳ್ಳು. ಚೂನವ್ವನ ಮರಣಾನಂತರ ಅಡಿವೆವ್ವ ದಾವಾ ಜಮೀನಿನ ಕಬ್ಜೆಯಲ್ಲಿದ್ದಾರೆಂದರೆ ಸುಳ್ಳು. ದಾವೆ ಹಾಕಿದ ದಿನ ರಾಯಪ್ಪನ ಹೆಸರು ಆತನ ಹೆಂಡತಿ ಮಕ್ಕಳ ಪರ ಉತಾರದಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ರಾಯಪ್ಪನ ಮೇಲೆ ಕೊಲೆ ಪ್ರಕರಣ ಇತ್ತು ಆತನಿಗೆ ಶಿಕ್ಷೆಯಾಗಿತ್ತು ಎಂದರೆ ಸುಳ್ಳು. ನಾನು ಖರೀದಿಗೆ ತೆಗೆದುಕೊಂಡ ನಂತರವೂ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಬಂದಿಲ್ಲ ಈಗಲೂ ಸಹ ಚೂನವ್ವ ಮತ್ತು ಮಕ್ಕಳಿಗೆ ಪಾಲು ಇದೆ ಎಂದರೆ ಸುಳ್ಳು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಗೋಕಾಕ